**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5036/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಗಿರೀಶ್. ಕೆ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಕೆಂಪಯ್ಯ | **06.07.2026** |
| **ವಯಸ್ಸು** | : | 36 ವರ್ಷ | |
| **ವೃತ್ತಿ** | : | ವ್ಯವಸಾಯ | **ಫ್ರಾ.ಸಾಃ 08** |
| **ವಾಸ ಸ್ಥಳ** | : | ದೊಡ್ಡಿಂದುವಾಡಿ | **ಚಾ.ಸಾಃ 15** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಈಗ ತೋರಿಸುತ್ತಿರುವ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ. ದಿಃ 22.06.2025 ರಂದು ಚಾಸಾ 23 ರವರು ಆರೋಪಿಯ ಮನೆಯಿಂದ 2 ಮೊಬೈಲ್ ಗಳನ್ನು ಪೋಲೀಸರ ಮುಂದೆ ಹಾಜುರುಪಡಿಸಿದರು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ 16 ರವರು ಇದ್ದರು. ಮಹಜರ್ ಪೂರ್ವದಲ್ಲಿ ಪೋಲೀಸರು ನನಗೆ ನೋಟಿಸ್ ಕೊಟ್ಟರು. ನೋಟಿಸ್ ಅನ್ನು ನಿಪಿ 59 ಎಂದು, ಸಾಕ್ಷಿ ಸಹಿಯನ್ನು ನಿಪಿ 59(ಎ) ಎಂದು ಗುರುತಿಸಲಾಯಿತು. ಮಹಜರ್ ಅನ್ನು ನಿಪಿ 60 ಎಂದು, ಸಾಕ್ಷಿ ಸಹಿಯನ್ನು ನಿಪಿ 60(ಎ) ಎಂದು ಗುರುತಿಸಲಾಯಿತು. ಮಹಜರಿಗೆ ಚಾಸಾ 16 ರವರು ಮತ್ತು 23 ರವರು ಸಹಿ ಮಾಡಿರುತ್ತಾರೆ. ಚಾಸಾ 23 ಆರೋಪಿಯ ಪತ್ನಿ. ಮಹಜರ್ ಅನ್ನು ಸಂಜೆ 4.00 ಗಂಟೆಯಿಂದ 4.45 ರವರೆಗೆ ಬರೆದಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಒಂದು ಬಿಳಿ ಬಟ್ಟೆಯಲ್ಲಿ ಹೊಲಿದು ಸೀಲು ಮಾಡಿರುವ ವಸ್ತುಗಳನ್ನು ತೆರೆದು ನೋಡಲು ಅನುಮತಿ ಕೋರಿದ್ದು,ಅನುಮತಿ ನೀಡಲಾಯಿತು. ಸದರಿ ವಸ್ತುಗಳನ್ನು ತೆರೆದು ನೋಡಲಾಗಿ, ಅದರಲ್ಲಿದ್ದ ಮೊಬೈಲ್

ಗಳನ್ನು ಮು.ಮಾ 11 ಮತ್ತು 12 ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 61 ರಿಂದ 64 ಎಂದು ಗುರುತಿಸಲಾಯಿತು.

ಈಗ ತೋರಿಸುತ್ತಿರುವ ಮತ್ತೊಂದು ಮಹಜರಿನಲ್ಲಿ ನನ್ನ ಸಹಿ ಇರುತ್ತದೆ. ದಿಃ 25.06.2025 ರಂದು ಬಸ್ತಿಪುರ ಗ್ರಾಮದ ಮಾದೇಶ್ವರ ಸ್ವಾಮಿ ದೇವಸ್ಥಾನಲ್ಲಿ ಅಳವಡಿಸಿದ್ದ ಸಿಸಿಟಿವಿ ಯ ದೃಶ್ಯಾವಳಿಗಳನ್ನು ಪೋಲೀಸರು ಸಂಗ್ರಹಿಸಿದರು. ಆ ಸಮಯದಲ್ಲಿ ಬರೆದ ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ 65 ಎಂದು, ಸಾಕ್ಷಿ ಸಹಿಯನ್ನು ನಿಪಿ 65(ಎ) ಎಂದು ಗುರುತಿಸಲಾಯಿತು. (ನ್ಯಾಯಾಲಯದ ಮುಂದೆ ಇರುವ ಮೊಹರು ಮಾಡಿದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು ಅದರಲ್ಲಿದ್ದ ಪೆನ್ ಡ್ರೈವ್ ಅನ್ನು ನ್ಯಾಯಾಲಯದ ಕಂಪ್ಯೂಟರ್ ಮೂಲಕ ಚಾಲನೆ ಮಾಡಲಾಯಿತು). ಸಾಕ್ಷಿ ಪೆನ್ ಡ್ರೈವ್ ದಲ್ಲಿದ್ದ ದೃಶ್ಯಾವಳಿಗಳನ್ನು ಒಪ್ಪಿದ್ದು ಅದನ್ನು ನಿಪಿ 66 ಎಂದು ಗುರುತಿಸಲಾಯಿತು. (ದಿಃ 16.06.2025 ರ ಬೆಳಗಿನ ಜಾವ 3.19 ರಿಂದ 3.21 ರ ಕ್ಯಾಮೆರಾ-1 ದೃಶ್ಯಾವಳಿಗಳು ಸದರಿ ದೃಶ್ಯದಲ್ಲಿ ಒಂದು ದ್ವಿ ಚಕ್ರ ವಾಹನದಲ್ಲಿ ಇಬ್ಬರು ವ್ಯಕ್ತಿಗಳು ಪ್ರಯಾಣ ಮಾಡುತ್ತಿರುವುದು ಕಂಡು ಬರುತ್ತದೆ). ಮಹಜರ್ ಅನ್ನು ಮದ್ಯಾಹ್ನ 12.30 ರಿಂದ 1.15 ರವರೆಗೆ ಬರೆದರು. ಚಾಸಾ 19 ರವರು ಮಹಜರ್ ಸಮಯದಲ್ಲಿ ನನ್ನೊಂದಿಗೆ ಹಾಜರಿದ್ದರು. ಭಾವಚಿತ್ರಗಳನ್ನು ನಿಪಿ 67 ರಿಂದ 72 ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನನ್ನನ್ನು ಮೈಸೂರಿನ ಸೆನ್ ಪೊ.ಠಾಣೆಗೆ ಕರೆದುಕೊಂಡು ಹೋಗಿದ್ದರು. ಆಗ ಸಮಯ ಸಂಜೆ 4.30 ಗಂಟೆ ಆಗಿತ್ತು. ಪೋಲೀಸರು ಮೊಬೈಲ್ ಗಳಲ್ಲಿದ್ದ ದತ್ತಾಂಶಗಳನ್ನು ಹೊರ ತೆಗೆದಿರುತ್ತಾರೆ. ಮಹಜರ್ ಅನ್ನು ನಿಪಿ 73 ಎಂದು, ಸಾಕ್ಷಿ ಸಹಿಯನ್ನು ನಿಪಿ 73(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ 20 ರವರು ನನ್ನ ಜೊತೆ ಇದ್ದರು. ಆ ಸಮಯದಲ್ಲಿ ಪೋಲೀಸರು ಭಾವಚಿತ್ರಗಳನ್ನು ತೆಗೆದರು. ಭಾವಚಿತ್ರಗಳನ್ನು ನಿಪಿ 74 ರಿಂದ 77 ಎಂದು ಗುರುತಿಸಲಾಯಿತು. ಮೊಬೈಲ್ ಗಳನ್ನು ಮು.ಮಾ 11 ಮತ್ತು 12 ಎಂದು ಈಗಾಗಲೇ ಗುರುತಿಸಲಾಗಿದೆ. ಪೋಲೀಸರು ನನಗೆ ನೋಟಿಸ್ ಕೊಟ್ಟಿದ್ದರು.

ನೋಟಿಸ್ ಅನ್ನು ನಿಪಿ 78 ಎಂದು ಸಾಕ್ಷಿ ಸಹಿಯನ್ನು ನಿಪಿ 78(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ವಕೀಲರಿಂದ**

ಕಾಲಾವಕಾಶ ಕೋರಿರುತ್ತಾರೆ. ಯಾವುದೇ ಸಕಾರಣ ಇರುವುದಿಲ್ಲ. ಆದ್ದರಿಂದಕಾಲಾವಕಾಶ ನೀರಾಕರಿಸಲಾಯಿತು. ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ